
ಶ್ರೀಮಾತೆಯವರ ಶಿಲಾಸನ

ಬೀರುತ್ತಾ, ದರ್ಶನಾಕಾಂಕ್ಷಿಗಳಾಗಿ ಬಂದ ಅದೃಶ್ಯ ದೇವಗಣಗಳಿಗೆ ದರ್ಶನ ನೀಡುತ್ತಾ, ಸ್ಥಿರವಾಗಿ ಕುಳಿತಂತೆಯೂ ಆ ದೃಶ್ಯ ಕಂಗೊಳಿಸುತ್ತಿತ್ತು. ಮಾತೃಭಕ್ತರಾದ ಸ್ವಾಮಿ ರಾಮಕೃಷ್ಣಾ ನಂದರು ಧಾವಿಸಿ ಬಂದು, ಹೀಗೆ ಧ್ಯಾನಮಗ್ನರಾಗಿ ಕುಳಿತಿದ್ದ ದಿವ್ಯಮೂರ್ತಿಯನ್ನು ಕಣ್ಣಾರೆ ಕಂಡು, ಮೂಕವಿಸ್ಮಿತರಾದರು. ಭಾವಾವೇಶದಿಂದ ಶ್ರೀಮಾತೆಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ, **"ಸರ್ವಮಂಗಳ ಮಾಂಗಲ್ಯೇ..."** ಎಂಬ ದುರ್ಗಾಸಪ್ತಶತಿಯ ಶ್ಲೋಕಗಳಿಂದ ಅವರನ್ನು ಸ್ತುತಿಸಿದರು. "ತಾಯಿ, ಕೃಪೆಮಾಡು, ಕೃಪೆಮಾಡು" ಎಂದು ಪ್ರಾರ್ಥಿಸಲಾರಂಭಿಸಿದರು. ಈ ಸ್ತೋತ್ರಪಾಠದಿಂದ ಬಹಿರ್ಮುಖರಾದ ಶ್ರೀಮಾತೆಯವರು, ನಮಸ್ಕಾರ ಮಾಡುತ್ತಿರುವ ತಮ್ಮ ಪ್ರೀತಿಯ ಪುತ್ರನ ತಲೆ ಸವರಿದರು. ಅದೇ ಸಮಯದಲ್ಲಿ ಅಲ್ಲಿಗೆ ಬಂದ ಸ್ವಾಮಿ ನಿರ್ಮಲಾನಂದರ ಪ್ರಾರ್ಥನೆಯಂತೆ ಶ್ರೀಮಾತೆ ಅಲ್ಲಿಯೇ ಸ್ವಲ್ಪ ಹೊತ್ತು ಕುಳಿತು ಜಪ ಮಾಡಿದರು. ಆ ಸ್ಥಳವೇ ಇಂದು ಮಹಾತೀರ್ಥಕ್ಷೇತ್ರವಾಗಿದೆ. ದಿನೇ ದಿನೇ ಅದರ ಮಹತ್ವ ಹೆಚ್ಚುತ್ತಿದೆ ಎಂದರೆ ತಪ್ಪಾಗಲಾರದು. ಅಲ್ಲಿಗೆ ಬಂದ ಭಕ್ತರಿಗೆಲ್ಲ ಮಾತೃವಾತ್ಸಲ್ಯದ ಪ್ರವಾಹವನ್ನೇ ಹರಿಸುತ್ತಾ, ಎಲ್ಲರಿಗೂ ಶಾಂತಿ ನೆಮ್ಮದಿಯನ್ನು ನೀಡುತ್ತಾ ಸುಖಾಸೀನರಾಗಿ, ಸ್ಮಿತವದನೆಯಾಗಿ ವಿರಾಜಿಸುತ್ತಿದ್ದಾರೆ, ಶ್ರೀಮಾತೆ ಶಾರದಾದೇವಿ! ಸ್ವಾಮಿ ವಿಶುದ್ಧಾನಂದರು ತಮ್ಮ ಸ್ಮೃತಿಲೇಖನದಲ್ಲಿ ಹೀಗೆ ಬರೆದಿದ್ದಾರೆ: "ಶ್ರೀಮಾತೆಯವರು ಬೆಂಗಳೂರಿಗೆ ಬರುವರೆಂಬ ವಿಷಯವನ್ನು ಯಾವ ರೀತಿಯಿಂದಲೂ ಪ್ರಚಾರ ಮಾಡಿರಲಿಲ್ಲ. ಆದರೂ ತಾಯಿಯ ಚರಣಸೌರಭಕ್ಕೆ ಆಕರ್ಷಿತರಾಗಿ ಬಂದ ಭಕ್ತಭ್ರಮರಗಳ ಸಂಖ್ಯೆ ಅಗಣಿತವಾಗಿತ್ತು. ಶ್ರೀಮಾತೆಗಾಗಿ ಅವರೆಲ್ಲ ತರುತ್ತಿದ್ದ ಪುಷ್ಪಗಳು ರಾಶಿರಾಶಿಯಾಗಿ, ಅದೇ ಒಂದು ಗೋಪುರದಂತೆ ಕಾಣುತ್ತಿತ್ತು."



ಶ್ರೀಮಾತೆಯವರು ಮೂರು ದಿನ ಮಾತ್ರ ಬೆಂಗಳೂರಿನಲ್ಲಿ ಇದ್ದರು. ಆ ಅಲ್ಪ ಅವಧಿಯಲ್ಲಿಯೇ ಅನೇಕ ಭಕ್ತರಿಗೆ ಮಂತ್ರದೀಕ್ಷೆ ಕೊಟ್ಟು ಅವರನ್ನು ಕೃತಾರ್ಥರನ್ನಾಗಿ ಮಾಡಿದರು. ಬೇರೆಯವರ ಸಹಾಯ ಪಡೆದು ಕೆಲವರ ಬಳಿ ಮಾತನಾಡಿದರು ಕೂಡ. ಮತ್ತೆ ಕೆಲವರನ್ನು ತಮ್ಮ ಪ್ರಶಾಂತ ದೃಷ್ಟಿಮಾತ್ರದಿಂದಲೇ ಆಶೀರ್ವದಿಸಿದರು. ಜಗಜ್ಜನನಿಯ ಕೃಪೆ ಯಾರ ಮೇಲೆ, ಹೇಗೆ ಹರಿಯುತ್ತದೆ ಎನ್ನುವುದನ್ನು ಯಾರಿಗೂ ಹೇಳಲು ಸಾಧ್ಯವಿಲ್ಲ!

ಸ್ವಾಮಿ ವಿಶುದ್ಧಾನಂದರು ಆಗಿನ ಘಟನೆಗಳನ್ನು ತಮ್ಮ ದಿನಚರಿಯಲ್ಲಿ ಹೀಗೆ ಸ್ಮರಿಸಿಕೊಳ್ಳುತ್ತಾರೆ: "ಶ್ರೀಮಾತೆಯ ಭಾಷೆ ಭಕ್ತರಿಗೆ, ಭಕ್ತರ ಭಾಷೆ ಶ್ರೀಮಾತೆಗೆ ತಿಳಿಯುತ್ತಿರಲಿಲ್ಲ. ಆದರೂ ಅನಿರ್ವಚನೀಯವಾದ ರೀತಿಯಲ್ಲಿ ಭಕ್ತರ ಮತ್ತು ಶ್ರೀಮಾತೆಯವರ ನಡುವೆ ಮಧುರ ಸಂಭಾಷಣೆ ನಡೆಯುತ್ತಿತ್ತು. ಮಾತೃಸಾನ್ನಿಧ್ಯವೇ ಅಲ್ಲಿ ಮೌನದ ಮಾತಾಗಿತ್ತು. ಈ ನೀರವತೆಯ ಮಧ್ಯೆ ಆ ವಿಶ್ವಮಾತೆ ತೋರ್ಪಡಿಸುತ್ತಿದ್ದ ಸ್ವರ್ಗಸದೃಶ ಪ್ರೀತಿ, ಸಾಧಾರಣ ಜನರು ಆಡುವ ಮಾತುಗಳಂತೆ ಕಲುಷಿತವಾಗಿರಲಿಲ್ಲ. ಜಗನ್ಮಾತೆ ಸರ್ವಭೂತಗಳಲ್ಲಿ ನೆಲೆಸಿದ್ದಾಳೆ. ಆದ್ದರಿಂದ ಶ್ರೀಮಾತೆಯ ಸಾನ್ನಿಧ್ಯಮಾತ್ರದಿಂದಲೇ ಅಲ್ಲಿದ್ದ ಎಲ್ಲರ ಹೃದಯವೂ ಆನಂದದಿಂದ ತುಂಬಿತ್ತು. ಅಲ್ಲಿ ಲೌಕಿಕ ಭಾಷೆಯ ಅಗತ್ಯವೇ ಇರಲಿಲ್ಲ."

ಹೀಗೆ ಶ್ರೀಮಾತೆಯವರು ತಮ್ಮ ದಿವ್ಯಾಗಮನದಿಂದ ಬೆಂಗಳೂರು ಆಶ್ರಮವನ್ನು ಪುನೀತಗೊಳಿಸಿದರು; ಅದನ್ನೊಂದು ತೀರ್ಥಕ್ಷೇತ್ರವನ್ನಾಗಿ ಮಾಡಿಬಿಟ್ಟರು. ಇಲ್ಲಿನ ಭಕ್ತರನ್ನು ಅನುಗ್ರಹಿಸಿ, ಸ್ವತಃ ತಾವೂ ಆನಂದವನ್ನು ಅನುಭವಿಸಿದರು. ಬಳಿಕ ೧೯೧೧ರ ಮಾರ್ಚ್ ೨೭ರಂದು ಮದ್ರಾಸಿಗೆ ಹಿಂದಿರುಗಿದರು.



ಇದಾಗಿ ಈಗ ೧೦೦ ವರುಷಗಳಾಗುತ್ತಿವೆ. ಆ ಸಮಯದಲ್ಲಿ ಶ್ರೀಮಾತೆಯ ಪಾದಸ್ಪರ್ಶ ಮಾಡಿದವರು ಯಾರೂ ಈಗ ಜೀವಂತವಾಗಿಲ್ಲ. ಆದರೂ ಎಲ್ಲವೂ ಮುಗಿದುಹೋಯಿತೇ?! ಈಗಲೂ ಬೆಂಗಳೂರಿನ ಆಶ್ರಮದಲ್ಲಿ ಶ್ರೀಮಾತೆಯವರ ನಿತ್ಯಸಾನ್ನಿಧ್ಯದ ಕೃಪೆಯ ಆನಂದದ ಅನುಭವ ಭಕ್ತರಿಗೆ ಆಗುತ್ತಿಲ್ಲವೇ! ರೂಪದಿಂದ ಅರೂಪವಾಗಿ ಸೀಮಾರೇಖೆಯನ್ನು ದಾಟಿ ಅಸೀಮವಾಗಿ ಶಾಶ್ವತವಾಗಿ ನೆಲೆಸಿದ್ದಾಳೆ ತಾಯಿ ದುರ್ಗೆ, ಶ್ರೀಮಾತೆ ಶಾರದಾದೇವಿಯ ರೂಪದಲ್ಲಿ, ನಮ್ಮ ಬೆಂಗಳೂರಿನಲ್ಲಿ. •

# ಶ್ರೀಮಾತೆಯವರ ದಾಕ್ಷಿಣಾತ್ಯ ಶಿಷ್ಯರು

ಪ್ರವ್ರಾಜಿಕಾ ಭವಾನಿಪ್ರಾಣಾ

**ಯು**ಗಾವತಾರರಾದ ಶ್ರೀರಾಮಕೃಷ್ಣರು ಈ ಮರ್ತ್ಯ ಜಗತ್ತಿನಲ್ಲಿ ತಮ್ಮ ಲೀಲೆಯನ್ನು ಪ್ರಕಟಿಸಿದಾಗ ತಮ್ಮೊಂದಿಗೆ ಶಕ್ತಿಸ್ವರೂಪಿಣಿಯಾದ ಶ್ರೀಶಾರದಾದೇವಿಯವರನ್ನೂ ಕರೆ ತಂದರು. ಶ್ರೀರಾಮಕೃಷ್ಣರು ಇದ್ದಷ್ಟು ದಿನ ಶ್ರೀಮಾತೆಯವರು ಪಶ್ಚಿಮ ಬಂಗಾಳದ ಹೊರಗೆ ಹೋದಂತೆ ಕಾಣುವುದಿಲ್ಲ. ಅವರು ಸಮಾಧಿಸ್ಥರಾದ ನಂತರ ಶ್ರೀಮಾತೆಯವರ ಕಾರ್ಯ ಕ್ಷೇತ್ರ ವ್ಯಾಪಕವಾಗಿ ಅವರಲ್ಲಿದ್ದ ಗುರುಶಕ್ತಿಯು ಪೂರ್ಣ ವಿಕಾಸವಾಗುವುದನ್ನು ಗಮನಿಸುತ್ತೇವೆ. ಶ್ರೀರಾಮಕೃಷ್ಣರು ಎಂದೂ ದಕ್ಷಿಣಭಾರತ ಪರ್ಯಟನೆ ಮಾಡಲಿಲ್ಲ. ದಾಕ್ಷಿಣಾತ್ಯ ಭಕ್ತರ ಈ ಕೊರತೆಯನ್ನು ನಿವಾರಿಸಿ ಅವರ ಮೇಲೆ ಕೃಪಾವರ್ಷ ಮಾಡಲೋ ಎಂಬಂತೆ ಶ್ರೀಮಾತೆ ದಕ್ಷಿಣಭಾರತಕ್ಕೆ ಆಗಮಿಸಿದರು.

"ಅವಳು ಸಾಕ್ಷಾತ್ ಸರಸ್ವತಿ, ಜ್ಞಾನದಾಯಿನಿ, ಸಾಮಾನ್ಯಳಲ್ಲ" ಎಂದು ಶ್ರೀಮಾತೆಯವರ ಬಗ್ಗೆ ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಜ್ಞಾನವಿತರಣೆಗೆ ಭಾಷೆಯ ಮಾಧ್ಯಮ ಬೇಕಲ್ಲವೇ? ಆದರೆ ಶ್ರೀಮಾತೆಯವರ ವಿಷಯದಲ್ಲಿ ಇದು ಅನಗತ್ಯವಾಯಿತು. ಗುರುವಿನ ಪ್ರೇಮಪೂರ್ಣ ಹೃದಯ ಮತ್ತು ಜಿಜ್ಞಾಸು ಶಿಷ್ಯನ ತೀವ್ರ ಇಚ್ಛೆ ಮಿಳಿತವಾದಾಗ ಅಲ್ಲಿ ಶಬ್ದವೈಖರಿಯ ಆವಶ್ಯಕತೆ ಇರುವುದಿಲ್ಲ. ಅಲ್ಲದೇ ಶ್ರೀಮಾತೆಗೂ ಅವರ ಭಕ್ತರಿಗೂ ಇದ್ದ ಸಂಪರ್ಕ ಕೇವಲ ಗುರು–ಶಿಷ್ಯ ಸಂಬಂಧ ಮಾತ್ರವಾಗಿರಲಿಲ್ಲ; ತಾಯಿಗೂ ಅವಳ ಶಿಶುವಿಗೂ ಇರುವ ಸಂಬಂಧವೂ ಆಗಿತ್ತು. ಶ್ರೀಮಾತೆಯವರ ವಿದೇಶೀ ಭಕ್ತರಾದ ಸ್ವಾಮಿ ಅತುಲಾನಂದರು ಹೇಳುವಂತೆ, ತಾಯಿಯೊಂದಿಗೆ ಮಾತನಾಡಲು, ಆಕೆಯ ಮಡಿಲಿನಲ್ಲಿ ಮಲಗಿರುವ ಶಿಶುವಿಗೆ ಯಾವ ಭಾಷೆಯೂ ಬೇಡ. ಅದೊಂದು ಶಬ್ದಾತೀತ ಭಾವವಿನಿಮಯ.

ಶ್ರೀಮಾತೆ ತಮ್ಮ ದಕ್ಷಿಣ ಭಾರತದ ಪರ್ಯಟನೆಯಲ್ಲಿ ಭಕ್ತರೊಂದಿಗೆ ನಡೆಸಿದ ಲೀಲೆ ಅದ್ಭುತವಾದದ್ದು. ಎಷ್ಟೋ ಭಕ್ತರು ಅವರ ಸಾನ್ನಿಧ್ಯವನ್ನು ಪಡೆದು ಅವರ ಕೃಪೆಗೆ ಪಾತ್ರರಾದರು. ಅವರಿಂದ ಮಂತ್ರದೀಕ್ಷೆಯನ್ನು ಸ್ವೀಕರಿಸಿದರು. ಅವರೆಲ್ಲರ ಸಂಪೂರ್ಣ ವಿವರ ನಮಗೆ ತಿಳಿಯದು. ಆದರೂ ಬ್ರಹ್ಮಚಾರಿ ಅಕ್ಷಯಚೈತನ್ಯ ಎಂಬ ಶ್ರೀಮಾತೆಯ ಶಿಷ್ಯರೊಬ್ಬರು ಈ ವಿಷಯದಲ್ಲಿ ಅನ್ವೇಷಣೆ ನಡೆಸಿ ಪ್ರಕಟಿಸಿರುವ ಮಾಹಿತಿಯಲ್ಲಿ ಕಂಡುಬರುವ ದಾಕ್ಷಿಣಾತ್ಯ ಶಿಷ್ಯರ ವಿವರ ಹೀಗಿದೆ:

**ತಮಿಳುನಾಡು:** ೧. ಸ್ವಾಮಿ ಚಿದ್ಭಾನಾನಂದ (ಶಂಕರ); ೨. ವಿ. ನಾರಾಯಣ ಅಯ್ಯರ್, ಮದ್ರಾಸು; ೩. ಸುಂದರಿ ಅಯ್ಯರ್ (ನಾರಾಯಣ ಅಯ್ಯರ್‌ರ ಪತ್ನಿ).



**ಕರ್ನಾಟಕ :** ೧. ಸ್ವಾಮಿ ವೀರೇಶ್ವರಾನಂದ, ಮಂಗಳೂರು; ೨. ಸ್ವಾಮಿ ಶ್ರೀವಾಸಾನಂದ (ನಾರಾಯಣ ಅಯ್ಯಂಗಾರ್), ಬೆಂಗಳೂರು; ೩. ಸ್ವಾಮಿ ಮೋಕ್ಷದಾನಂದ (ಮುದ್ದಪ್ಪ), ಪೊನ್ನಂಪೇಟೆ, ಕೊಡಗು; ೪. ಕೃಷ್ಣ ಮಂದಿರಮ್ (ನಾರಾಯಣ ಅಯ್ಯಂಗಾರರ ಪತ್ನಿ), ಬೆಂಗಳೂರು; ೫. ರಂಗನಾಯಕಿ (ನಾರಾಯಣ ಅಯ್ಯಂಗಾರರ ಹಿರಿಯ ಮಗಳು), ಬೆಂಗಳೂರು; ೬. ಕನಕ, ಶ್ರೀಶಾರದಾ ಮಾತೃಮಂದಿರ, ಫ್ರೇಜರ್‌ಪೇಟೆ, ಬೆಂಗಳೂರು; ೭. ಶಿವಾ, ಶ್ರೀಶಾರದಾ ಮಾತೃಮಂದಿರ, ಫ್ರೇಜರ್ ಪೇಟೆ, ಬೆಂಗಳೂರು; ೮. ಎಮ್. ರಾಜಗೋಪಾಲ ನಾಯ್ಡು; ೯. ಎನ್. ವೆಂಕಟೇಶ ಅಯ್ಯಂಗಾರ್, ಬೆಂಗಳೂರು ೧೦. ಎಮ್. ಶ್ರೀರಂಗಮ್ಮಾಳ್, ಮೈಸೂರು; ೧೧. ಪಿ. ಆದಿಮೂಲಂ ಪಿಳ್ಳೈ, ಫೋರ್‌ಮನ್, ಶಿವನಸಮುದ್ರಂ.

**ಕೇರಳ :** ೧. ಸ್ವಾಮಿ ಅಂಬಾನಂದ (ಸಿ. ಮಧುರನ್ ಪಿಳ್ಳೈ), ವಿವೇಕಾನಂದ ಆಶ್ರಮ, ಮಾವೇಲಿಕರಾ; ೨. ಸಿ. ದಾಮೋದರ ಪಿಳ್ಳೈ.

*ಶ್ರೀಮಾತೆಯವರು ದಕ್ಷಿಣ ಭಾರತಕ್ಕೆ ಭೇಟಿ ನೀಡಿದಾಗ ಇಲ್ಲಿನ ಅನೇಕ ಜನರ ಮೇಲೆ ತಮ್ಮ ಕರುಣೆಯ ವರ್ಷವನ್ನು ಹರಿಸಿದ್ದಾರೆ. ಅವರಲ್ಲಿ ಕೆಲವರ ಹೃದಯಸ್ಪರ್ಶಿ ವಿವರವನ್ನು ನಮಗೆ ನೀಡಿರುವ ಪೂಜ್ಯ ಮಾತಾಜಿಯವರು ಶ್ರೀಶಾರದಾಮಠದ ಹಿರಿಯ ಸಂನ್ಯಾಸಿನಿ. ಇವರು ಕೊಲ್ಕತ್ತಾದ ಶ್ರೀರಾಮಕೃಷ್ಣ ಶಾರದಾ ಮಿಷನ್ ನಿವೇದಿತಾ ವಿದ್ಯಾಲಯದಲ್ಲಿ ಹಲವಾರು ವರ್ಷಗಳು ಸೇವೆ ಸಲ್ಲಿಸಿದರು. ಈಗ ಕಳೆದ ಹತ್ತು ವರ್ಷಗಳಿಂದ ಆಂಧ್ರಪ್ರದೇಶದ ಗುಂಟೂರಿನ ಶ್ರೀಶಾರದಾಮಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.*

ಈ ಶಿಷ್ಯರಲ್ಲಿ ಕೆಲವರು ಶ್ರೀಮಾತೆಯವರನ್ನು ಕುರಿತು ತಮ್ಮ ಸ್ಮೃತಿಯನ್ನು ಬರೆದಿಟ್ಟುಹೋಗಿದ್ದಾರೆ. ಇನ್ನು ಕೆಲವರ ಬಗ್ಗೆ ಶ್ರೀಮಾತೆಯ ಜೀವನ ಚರಿತ್ರೆಕಾರರ ಅಥವಾ ಸ್ಮೃತಿ ಸಂಕಲನಕಾರರ ಬರಹಗಳಿಂದ ಆಯ್ದು ಅವರ ವಿಷಯವಾಗಿ ದೊರಕಿದ ಮಾಹಿತಿಯನ್ನು ಸಂಕ್ಷಿಪ್ತವಾಗಿ ತಿಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

### ೧. ಸ್ವಾಮಿ ವೀರೇಶ್ವರಾನಂದ



ಶ್ರೀರಾಮಕೃಷ್ಣ ಸಂಘದ ಹತ್ತನೆಯ ಅಧ್ಯಕ್ಷರಾಗಿ ವಿರಾಜಿಸಿದ ಇವರ ಪಾತ್ರ ಶ್ರೀಮಾತೆಯವರ ದಕ್ಷಿಣದೇಶದ ಶಿಷ್ಯರಲ್ಲೆಲ್ಲಾ ವಿಶಿಷ್ಟವಾದದ್ದು. ಮಂಗಳೂರಿನ ಗುರುಪುರದಲ್ಲಿ ಜನಿಸಿದ ಇವರ ಪೂರ್ವಾಶ್ರಮದ ಹೆಸರು ಪಾಂಡುರಂಗ ಪ್ರಭು. ೧೯೧೬ ಜೂನ್ ತಿಂಗಳ ಒಂದು ದಿನ ಇವರು ಪ್ರೇಮಾನಂದರು ನೀಡಿದ ಪರಿಚಯಪತ್ರವನ್ನು ಹಿಡಿದುಕೊಂಡು, ಭಕ್ತರೊಬ್ಬರೊಡನೆ ಶ್ರೀಮಾತೆಯ ಜನ್ಮಸ್ಥಾನವಾದ ಜಯರಾಂಬಾಟಿಗೆ ಬಂದು ತಲುಪಿದರು. ಪ್ರಥಮ ದರ್ಶನವಾದಾಗ ಶ್ರೀಮಾತೆ ಒಬ್ಬರೇ ಕುಳಿತು ರಾತ್ರೆಯ ಅಡುಗೆಗೆ ತರಕಾರಿ ಹಚ್ಚುತ್ತಿದ್ದರು. ಪ್ರೇಮಾನಂದರ ಪತ್ರವನ್ನು ಬ್ರಹ್ಮಚಾರಿಯೊಬ್ಬರ ಮೂಲಕ ಓದಿಸಿ ಕೇಳಿ, ನಾಳೆಯೇ ದೀಕ್ಷೆಯಾಗುವುದೆಂದು ತಿಳಿಸಿದರು. ಮರುದಿನವೇ ದೀಕ್ಷೆಯಾಯಿತು. ತಮ್ಮ ಗುರುವಾದ ಶ್ರೀಮಾತೆಯವರ ಬಗ್ಗೆ ಸ್ವಾಮಿ ವೀರೇಶ್ವರಾನಂದರು ತಮ್ಮ ನೆನಪಿನಿಂದ ತಿಳಿಸಿದ ಕೆಲವು ವಿಷಯಗಳನ್ನು ಮುಂದೆ ಕೊಡಲಾಗಿದೆ:

"ಬಾಹ್ಯದೃಷ್ಟಿಯಿಂದ ನೋಡಿದರೆ ಶ್ರೀಮಾತೆಯವರಲ್ಲಿ ಯಾವ ವೈಶಿಷ್ಟ್ಯವೂ ಕಾಣಬರುತ್ತಿರಲಿಲ್ಲ. ತಮ್ಮ ದಿವ್ಯತ್ವವನ್ನು ಅವರು ಅತಿ ಗೋಪ್ಯವಾಗಿಡುತ್ತಿದ್ದರು. ಸಾಧಾರಣ ಗ್ರಾಮ್ಯ ಸ್ತ್ರೀಯಂತೆ ವ್ಯವಹರಿಸುತ್ತಿದ್ದರು. ಶ್ರೀರಾಮಕೃಷ್ಣರಲ್ಲಿ ತ್ಯಾಗವೇ ವಿಶಿಷ್ಟ ಗುಣವೆಂದು ಹೇಳುತ್ತಿದ್ದರು. ತಮ್ಮ ಸ್ವಂತ ಜೀವನದಲ್ಲೂ ಶ್ರೀಮಾತೆ ತ್ಯಾಗ ಮತ್ತು ಸೇವೆಯ ಆದರ್ಶವನ್ನೇ ಪ್ರತಿಪಾದಿಸಿದ್ದಾರೆ. ಬಡಬಗ್ಗರ ಬಗ್ಗೆ ಅವರ ಹೃದಯ ಅನುಕಂಪದ ಸಂವೇದನೆಯಿಂದ ಕೂಡಿತ್ತು. ಒಮ್ಮೆ ಭಕ್ತರೊಬ್ಬರು ಬೇಲೂರುಮಠಕ್ಕೆ ಬಹಳ ಹಣವನ್ನು ದಾನ ಮಾಡಿದ್ದಾರೆಂಬ ವಿಷಯ ತಿಳಿದಾಗ ಅವರು, 'ಅದೇನೋ ಸರಿ, ಸಾಧುಸೇವೆಗಾಗಿ ದಾನ ಮಾಡಿದ್ದಾರೆ. ಆದರೆ ದುಃಖಿ ದೀನ ದಲಿತರಿಗಾಗಿ ಏನಾದರೂ ಧನಸಹಾಯ ಮಾಡಿದ್ದಾರೆಯೇ?' ಎಂದು ವಿಚಾರಿಸುತ್ತಾರೆ."

ವಿದೇಶೀ ಶಾಸನದ ಕಾಲ ಅದು. ಸ್ವದೇಶೀ ಆಂದೋಲನದಲ್ಲಿ ಪಾತ್ರ ವಹಿಸುತ್ತಿದ್ದ ಯುವಕರು ದೀಕ್ಷೆಗಾಗಿ ಪ್ರಾರ್ಥಿಸಿದಾಗ ರಾಜಶಾಸನದ ಭಯದಿಂದ ಶ್ರೀಮಾತೆ ಎಂದೂ ಹಿಂಜರಿದವರಲ್ಲ. ಯಾವ ಆಕಾಂಕ್ಷಿಯನ್ನೂ ಹಿಂದಿರುಗಿಸಿದವರಲ್ಲ. ಯಾರಾದರೂ ತ್ಯಾಗಜೀವನವನ್ನು ಸ್ವೀಕರಿಸಿ, ಸಂನ್ಯಾಸಿಗಳಾದರೆ ಅವರಿಗೆಷ್ಟೋ ಆನಂದ. ಒಮ್ಮೊಮ್ಮೆ ವಿವಾಹಿತ ವ್ಯಕ್ತಿಯಾದರೂ ಒಳ್ಳೆಯ ಸಂಸ್ಕಾರವುಳ್ಳವರೆಂದು ಕಂಡುಬಂದರೆ, ಅಂಥವರಿಗೂ ಶ್ರೀಮಾತೆಯವರು ಸಂನ್ಯಾಸಕ್ಕೆ ಅನುಮತಿ ಕೊಡುತ್ತಿದ್ದರು.

ಶ್ರೀಮಾತೆ ಕಂಡ ಒಂದು ದಿವ್ಯದರ್ಶನವನ್ನು ಕುರಿತು ಬಹುಬಾರಿ ಸ್ವಾಮಿ ವೀರೇಶ್ವರಾನಂದರು ಪ್ರಸ್ತಾಪಿಸುತ್ತಿದ್ದರು:

ಬಾಲಕಿಯೊಬ್ಬಳು ನೆಲ ಗುಡಿಸುತ್ತಿದ್ದಾಳೆ. ಅವಳ ಕಂಕುಳಲ್ಲಿ ನೀರು ತುಂಬಿದ ಬಿಂದಿಗೆಯಿದೆ.

**ಶ್ರೀಮಾತೆ:** ಏನು ಮಾಡುತ್ತಿದ್ದೀಯಮ್ಮಾ?

**ಬಾಲಕಿ:** ಅಶುಭ, ಅಮಂಗಳ ಕಸವನ್ನೆಲ್ಲಾ ಗುಡಿಸಿ ದೂರ ಮಾಡುತ್ತಿದ್ದೇನೆ.

**ಶ್ರೀಮಾತೆ:** ಆ ಬಿಂದಿಗೆ ಯಾಕೆ?

**ಬಾಲಕಿ:** ಬಿಂದಿಗೆಯಲ್ಲಿರುವ ಅಮೃತಜಲವನ್ನು ಚಿಮುಕಿಸಿ ಜೀವಿಗಳಿಗೆಲ್ಲಾ ಶಾಂತಿಯನ್ನು ನೀಡುತ್ತೇನೆ. ಬೇಗೆಯನ್ನು ತಂಪುಗೊಳಿಸುತ್ತೇನೆ.

ಸ್ವಾಮಿ ವೀರೇಶ್ವರಾನಂದರು ಶ್ರೀಮಾತೆಯವರ ಮಹಾಸಮಾಧಿಯ ಪ್ರತ್ಯಕ್ಷದರ್ಶಿಯಾಗಿದ್ದರು. ಆ ಸಂದರ್ಭದ ಒಂದೆರಡು ಘಟನೆಗಳು ಅವರ ಮೂಲಕವೇ ನಮಗೆ ತಿಳಿದುಬಂದಿವೆ. ಶ್ರೀಮಾತೆಯ ಭೌತಿಕ ದೇಹವನ್ನು ದಹನ ಮಾಡುವ ಮುಂಚೆ ಸ್ವಾಮಿ ಶಿವಾನಂದರು ಸಾಧು ಬ್ರಹ್ಮಚಾರಿಗಳಿಗೆ ಹೀಗೆ ಹೇಳಿದರು: "ಶ್ರೀಮಾತೆಯ ಅಂತಿಮ ದರ್ಶನವನ್ನು ಹೊಂದಿ ಧನ್ಯರಾಗಿ. ಇನ್ನು ಮುಂದೆ ಇಂತಹ ಪ್ರತ್ಯಕ್ಷದರ್ಶನ ಸಾಧ್ಯವಾಗುವುದಿಲ್ಲ. ಹೆಚ್ಚೆಂದರೆ ಧ್ಯಾನಕಾಲದಲ್ಲಿ ಒಂದೆರಡು ಕ್ಷಣ ಅವರನ್ನು ದರ್ಶಿಸಬಹುದು, ಅಷ್ಟೇ." ಇನ್ನೊಂದು ಅದ್ಭುತ ಘಟನೆ. ಚಿತಾಗ್ನಿ ಉರಿಯುತ್ತಿರುವಾಗ ಗಂಗಾನದಿಯ ಇನ್ನೊಂದು ದಡದಲ್ಲಿ ಜೋರಾಗಿ ಮಳೆ ಆರಂಭವಾಯಿತು. ಆ ಮಳೆ ಗಂಗೆಯ ಮಧ್ಯದವರೆಗೂ ಬಂದು ನಿಂತುಹೋಯಿತು. ಈ ಕಡೆ

ಚಿತಾಗ್ನಿಯ ಮೇಲೆ ಪ್ರಖರ ಸೂರ್ಯನ ತಾಪ. ದಹನಾನಂತರ ಅಗ್ನಿಯನ್ನು ಆರಿಸಲು ಸ್ವಾಮಿ ಶಾರದಾನಂದರು ಒಂದು ಬಿಂದಿಗೆ ಗಂಗಾಜಲವನ್ನು ತಂದು ಸುರಿದರು. ಅಷ್ಟರಲ್ಲೇ ಅಲ್ಲಿದ್ದ ಇತರ ಭಕ್ತರೂ ಯಥಾಶಕ್ತಿ ಬಿಂದಿಗೆಗಳಲ್ಲಿ ನೀರು ತುಂಬಿಸಿ ತಂದರು. ಶ್ರೀಮಾತೆಗೆ ತಮ್ಮ ಪ್ರಿಯಪುತ್ರ ಶರತ್ ಹಾಕಿದ್ದೇ ಸಾಕಾಯಿತೋ ಎಂಬಂತೆ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿ ಎಲ್ಲರೂ ಸಂಪೂರ್ಣವಾಗಿ ನೆನೆದು ಹೋದರು. ಇನ್ಯಾರಿಗೂ ಚಿತೆಗೆ ನೀರು ಹಾಕುವ ಅವಕಾಶವೇ ದೊರೆಯಲಿಲ್ಲ. ಈ ಘಟನೆ ಕೇಳಲು ಅಸ್ವಾಭಾವಿಕ ಹಾಗೂ ಅಲೌಕಿಕವಾಗಿ ಕಂಡುಬಂದರೂ ವಾಸ್ತವವಾದುದು.

ಶ್ರೀಮಾತೆಯವರು ಸ್ವಾಮಿ ವೀರೇಶ್ವರಾನಂದಜಿ ಅವರಿಗೆ ಬರೆದ ಒಂದು ಪತ್ರದ ಪ್ರತಿ ಲಭ್ಯವಾಗಿದೆ:

**ಜಯರಾಂಬಾಟಿ, ಆನೂರು, ಹೂಗ್ಲಿ.** **೪ ಜೂನ್ ೧೯೧೭**

ಪ್ರಿಯ ಪ್ರಭು,

ನಿನ್ನ ಪತ್ರ ತಲುಪಿತು. ಮಗು, ನನಗೆ ನಿನ್ನ ವಿಷಯ ಸ್ಪಷ್ಟವಾಗಿ ನೆನಪಿದೆ. ನೀನು ಸಾಧುವಾಗಿರುವೆ ಮತ್ತು ನನ್ನ ಪ್ರಿಯ ಪುತ್ರ ರಾಖಾಲನ ಹತ್ತಿರ ಬ್ರಹ್ಮಚರ್ಯ ಸ್ವೀಕರಿಸಿರುವೆ ಎಂದು ತಿಳಿದು ಆನಂದಿತಳಾದೆ. ಈಗಲೇ ನನ್ನ ಬಳಿಗೆ ನೀನು ಬರುವ ಆವಶ್ಯಕತೆಯಿಲ್ಲ. ರಾಖಾಲನ ಆದೇಶವನ್ನು ಪಾಲಿಸು. ಶ್ರೀಗುರುಮಹಾರಾಜರ ಕೃಪೆಯಿಂದ ನೀನು ಎಲ್ಲಾ ಅನಾನುಕೂಲತೆಯನ್ನೂ ದಾಟಿಹೋಗುವೆ ಎಂದು ನನಗೆ ದೃಢ ವಿಶ್ವಾಸವಿದೆ. ಠಾಕೂರರಲ್ಲಿ ಪ್ರಾರ್ಥಿಸು. ಅವರು ಖಂಡಿತ ನಿನಗೆ ಕೃಪೆ ಮಾಡುತ್ತಾರೆ. ಪ್ರತಿದಿನ ನಿಯಮಿತವಾಗಿ ಧ್ಯಾನಾಭ್ಯಾಸ ಮಾಡು. ಕ್ರಮೇಣ ಮುಂದುವರಿಯುವೆ. ಮಗು, ಹತಾಶನಾಗದಿರು. ಮದ್ರಾಸಿನಲ್ಲಿ ನೂತನ ಮಠ ಪ್ರಾರಂಭವಾಗಿದೆಯೆಂದು ತಿಳಿದು ಸಂತೋಷವಾಯಿತು. ಸ್ವಲ್ಪ ಕಾಲದಲ್ಲೇ ಬಾಕಿ ಉಳಿದ ಕಟ್ಟಡಗಳ ಕಾರ್ಯವೂ ಸುಸಂಪನ್ನವಾಗುತ್ತದೆಂದು ಆಶಿಸುತ್ತೇನೆ.

ನಾನು ಕ್ಷೇಮ. ನಿನಗೆ ಸ್ನೇಹಾಶೀರ್ವಾದಗಳು. ಅವಶ್ಯಕತೆ ಇದ್ದಾಗಲೆಲ್ಲಾ ಪತ್ರ ಬರೆ. ಬಂಗಾಳಿ ಭಾಷೆ ತಿಳಿಯದೆಂದು ದುಃಖಿಸಬೇಡ. ನಿನಗೂ, ಮಠದಲ್ಲಿರುವ ಇತರ ಪುತ್ರರಿಗೂ ನನ್ನ ಆಶೀರ್ವಾದಗಳು.

ಇತಿ ನಿನ್ನ ಪ್ರೀತಿಯ .

**ಅಮ್ಮ**

**ವಿ.ಸೂ : ನೀನು ಇಂಗ್ಲಿಷ್‌ನಲ್ಲೇ ಪತ್ರ ಬರೆ. ಆದರೆ ಸ್ಪಷ್ಟವಾಗಿ ಬರೆ.**

### ೨. ಸ್ವಾಮಿ ಶ್ರೀವಾಸಾನಂದ

ಇವರು ಪೂರ್ವಾಶ್ರಮದಲ್ಲಿ ಬೆಂಗಳೂರಿನಲ್ಲಿ ಉತ್ತಮ ಅಧಿಕಾರದಲ್ಲಿ ಇದ್ದರು. ಇವರ ಪೂರ್ವಾಶ್ರಮದ ಹೆಸರು ನಾರಾಯಣ ಅಯ್ಯಂಗಾರ್. ಇವರು, ಇವರ ಪತ್ನಿ ಕೃಷ್ಣಮಂದಿರಮ್ ಮತ್ತು ಹಿರಿಯ ಮಗಳು ರಂಗನಾಯಕಿ – ಮೂವರೂ ಶ್ರೀಮಾತೆಯಿಂದ ಮಂತ್ರದೀಕ್ಷೆ ಪಡೆದರು.

ಶ್ರೀಮಾತೆಯು ರಾಧುವಿನ ಚಿಕಿತ್ಸೆಯ ಸಲುವಾಗಿ ಕೊಯಲ್‌ಪಾರಾದಲ್ಲಿ ವಾಸಿಸುತ್ತಿದ್ದರು. ಅಲ್ಲಿ ಶೋಕ, ತಾಪ, ಅಶಾಂತಿಯ ವಾತಾವರಣ ಇತ್ತು. ಇತರ ಭಕ್ತರೊಡನೆ ನಾರಾಯಣ ಅಯ್ಯಂಗಾರ್ ಅಲ್ಲೇ ಇದ್ದು ಪ್ರತಿದಿನ ಬೆಳಗ್ಗೆ,



ಸಂಜೆ ಶ್ರೀಮಾತೆಯನ್ನು ಭೇಟಿ ಮಾಡಿ ಬಹಳ ಸಮಯ ಮಾತುಕತೆಯಾಡಿ ಸಂತೃಪ್ತರಾಗುತ್ತಿದ್ದರು. ಶ್ರೀಮಾತೆ, ಹೀಗೆ ಬಂದವರ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿ ಆಧ್ಯಾತ್ಮಿಕ ಪಥದಲ್ಲಿ ಮುಂದುವರಿಯಲು ಮಾರ್ಗದರ್ಶನ ಮಾಡುತ್ತಿದ್ದರು.

ಮಾಕುವಿನ ಪುತ್ರ ನ್ಯಾಡಾ ಹಠಾತ್ತಾಗಿ ಮೃತ್ಯುವಶನಾದಾಗ ಶ್ರೀಮಾತೆ ಗಟ್ಟಿಯಾಗಿ ಅಳುವುದನ್ನು ನೋಡಿ ಅಯ್ಯಂಗಾರ್ ಪ್ರಶ್ನಿಸಿದರು: "ಅಮ್ಮಾ, ನೀವೂ ಸಾಧಾರಣ ಮನುಷ್ಯರಂತೆ ಏಕೆ ಹೀಗೆ ಅಳುತ್ತಿದ್ದೀರಿ?" ಉತ್ತರವಾಗಿ ಶ್ರೀಮಾತೆ, "ನೋಡು, ನಾನು ಸಂಸಾರದಲ್ಲಿದ್ದೇನೆ. ಈ ಸಂಸಾರವೃಕ್ಷದ ಫಲವನ್ನು ಅನುಭವಿಸಲೇಬೇಕು. ಅದಕ್ಕಾಗಿ ಈ ನನ್ನ ದುಃಖ" ಅಂದರು.

ಇನ್ನೊಮ್ಮೆ ಅಯ್ಯಂಗಾರ್ ಪ್ರಶ್ನಿಸುತ್ತಾರೆ, "ಅಮ್ಮಾ, ನಾವು ನಿಮ್ಮ ಪಾದಸ್ಪರ್ಶ ಮಾಡಿದಾಗ ನಿಮಗೆ ಅಷ್ಟು ಕಷ್ಟವಾದರೆ ನಾವು ಮಾಡದೆ ಇದ್ದರಾಯಿತು." ಅದಕ್ಕೆ ಶ್ರೀಮಾತೆಯವರ ಉತ್ತರ ಇದು: "ಇಲ್ಲ ಮಗು. ಇದಕ್ಕಾಗೇ ನಮ್ಮ ಜನ್ಮವಾಗಿರುವುದು. ಪಾಪಿ–ತಾಪಿಗಳ ಭಾರವನ್ನು ಇನ್ನಾರು ತಾನೆ ಹೊರುತ್ತಾರೆ? ಕೆಲವರು ಮುಟ್ಟಿದಾಗ ಕಾಲು ಸುಟ್ಟುಹೋದಂತೆ ಅನುಭವವಾಗುತ್ತದೆ. ಬೇರೆಯವರ ವಿಷಯ ಹಾಗಲ್ಲ. ನಿಮ್ಮಂಥವರು ನಮಸ್ಕಾರ ಮಾಡಿದರೆ ಪರವಾಗಿಲ್ಲ."